ನಂ: ಎಎಲ್‌ಎನ್(ಎನ್‌ಎವೈ)ಎಸ್‌ಆರ್/174/15-16

ಜಿಲ್ಲಾಧಿಕಾರಿಗಳವರ ಕಾರ್ಯಾಲಯ
ಬೆಂಗಳೂರು ಜಿಲ್ಲೆ
ಬೆಂಗಳೂರು, ದಿನಾಂಕ: 30/05/2016

:: **ಅಧಿಕೃತ ಜ್ಞಾಪನ** ::

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, **ತಿರುಮೇನಹಳ್ಳಿ** ಗ್ರಾಮದ ಸನಂ. 3/1 ರಲ್ಲಿ 1-20 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ **ಶ್ರೀನಿವಾಸ್ ಬಿನ್ ಎಂ. ರಾಮರಾಜು** ರವರು ಸಲ್ಲಿಸಿರುವ ಅರ್ಜಿ ದಿ: 29/01/2016

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 7 ಎಲ್‌ಜಿಪಿ 95 ದಿ: 07-06-1999
2) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ:2008 ದಿ: 10-9-2008 ಮತ್ತು 24-9-2008
3) ತಹಶೀಲ್ದಾರ್. ಬೆಂಗಳೂರು ಉತ್ತರ (ಅಪರ) ತಾಲ್ಲೂಕು ರವರ ವರದಿ ಸಂಖ್ಯೆ: ಎಎಲ್‌ಎನ್(ಎನ್‌ಎ)ಸಿಆರ್/53/15-16 ದಿನಾಂಕ: 18/04/2016
4) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರುರವರ ಪತ್ರದ ಸಂ: ಬೆಂಅಪ್ರಾ/ನಯೋಸ/ಸಿಓಎಸ್-87/128/16-17, ದಿ: 27/04/2016, ಉಪ ಆಯುಕ್ತರು(ಭೂ.ಸ್ವಾ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರುರವರ ಪತ್ರದ ಸಂ: ಬೆಂಅಪ್ರಾ/ಉಪ(ಭೂಸ್ವಾ)/99/16-17, ದಿ: 28/04/2016 ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರುರವರ ಪತ್ರ ಸಂ: ಎಸ್‌ಎಲ್‌ಎಒ/ಜಿಎಲ್/173/16-17, ದಿ: 21/04/2016 ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,ಖನಿಜ ಭವನ, ಬೆಂಗಳೂರು ರವರ ಪತ್ರ ಸಂ: ಬೆಂಗಳೂರು/ವಿಭೂಸ್ವಾಅ/156/16-17, ದಿ: 20/04/2016
5) ಭೂ ಪರಿವರ್ತನಾ ಶುಲ್ಕ ರೂ. 81,675/- ಹಾಗೂ ಪೋಡಿ ಶುಲ್ಕ ರೂ. 55/- ಒಟ್ಟು 81,730/-ರೂ.ಗಳನ್ನು, ಚಲನ್ ನಂ. 157 ರಂತೆ ದಿ: 24/05/2016 ರಂದು ಎಸ್.ಬಿ.ಎಂ. ಬೆಂಗಳೂರು ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.

****

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ **ವಾಸದ** ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ 54,450/-(ಐವತ್ನಾಲ್ಕು ಸಾವಿರದ ನಾಲ್ಕು ನೂರ ಐವತ್ತು ರೂಪಾಯಿಗಳು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (5) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ **ಶ್ರೀ ಶ್ರೀನಿವಾಸ್ ಬಿನ್ ಎಂ. ರಾಮರಾಜು, ನಂ. 49, ಎಸ್.ಬಿ.ಎಂ. ಲೇಔಟ್, ಆನಂದನಗರ, ಹೆಬ್ಬಾಳ, ಚೋಳನಾಯಕನಹಳ್ಳಿ, ಬೆಂಗಳೂರು-32** ರವರ ಅರ್ಜಿಯನ್ನು ಪರಿಗಣಿಸಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, **ತಿರುಮೇನಹಳ್ಳಿ** ಗ್ರಾಮದ **ಸರ್ವೆ** ನಂ. 3/1 ರಲ್ಲಿ 1-20 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1 ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ),ಬಿ.ಎಂ.ಐ.ಸಿ.ಎ.ಪಿ.ಎ/ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2 ಈ ಪರಿವರ್ತಿತ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು, ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು

3 ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿಐಎಪಿಎ/ಬಿಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಐ.ಸಿ. ಎ.ಪಿ.ಎ /ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.